IN THE MEDIA

ಪ್ರಜಾವಾಣಿ

Thursday, October 15th , 2009

# ರೇಡಿಯೊ ಒನ್ ಕಾಲೇಜು ಚಾಂಪಿಯನ್ಸ್




ರೇಡಿಯೊ ಒನ್ 94.3 ನಡೆಸಿದ ಕಾಲೇಜು ಪ್ರತಿಭಾ ಶೋಧದಲ್ಲಿ ಭಗವಾನ್ ಮಹಾವೀರ ಜೈನ್ ಕಾಲೇಜಿನ ವಿದ್ಯಾರ್ಥಿಗಳಾದ ಅರೋನಾ ಮತ್ತು ಅಭಿಜಿತ್ ಅವರು ಚಾಂಪಿಯನ್‌ಗಳಾಗಿ ಹೊರ ಹೊಮ್ಮಿದರು.

ದೇಶದ ಅತಿ ದೊಡ್ಡ ರೇಡಿಯೊ ಪ್ರತಿಭಾ ಶೋಧ ಎಂದೇ ಹೇಳಲಾಗುವ ಈ ಸ್ಪರ್ಧೆಯ ಅಂತಿಮ ಸುತ್ತನ್ನು ರೇಡಿಯೊ ಒನ್ ಕೇಂದ್ರದಿಂದ ನೇರ ಪ್ರಸಾರ ಮಾಡಲಾಯಿತು. ವಿವಿಧ ಹಂತಗಳಲ್ಲಿ ಆಯ್ಕೆಯಾಗಿ ಫೈನಲ್ಸ್‌ಗೆ ಬಂದ ಸ್ಪರ್ಧಿಗಳಿಗೆ ಒಂದು ವಾರ ಸ್ಟುಡಿಯೊದಲ್ಲಿ ಕಾರ್ಯಕ್ರಮ ನಡೆಸಿ ಪ್ರತಿಭೆ ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿತ್ತು.

ಕ್ರಿಕೆಟ್ ತಜ್ಞ ಚಾರು ಶರ್ಮಾ ಮತ್ತು ರೇಡಿಯೊ ಒನ್ ನಿಲಯ ನಿರ್ದೇಶಕ ಶಿಜು ವರ್ಕಿ ಹಾಜರಿದ್ದು ಸ್ಪರ್ಧಿಗಳನ್ನು ಹುರಿದುಂಬಿಸಿದರು.




ವಿಜೇತ ಅರೋನಾ, ಅಭಿಜಿತ್ (ಎಡ, ಬಲ ತುದಿ)

**Office of Corporate Affairs**
Jain Group of Institutions